***OS 106/2016 PW -2***

ದಿನಾಂಕಃ 03-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

*ಪಾಟೀ ಸವಾಲುಃಃ ಪ್ರತಿ ವಾದಿ ಪರ ವಕೀಲರಾದ ಶ್ರೀ ಎ ಆರ್ ಆರ್ ಸ ರವರಿಂದ*

1. ಸುಮಾರು 12-13 ವರ್ಷಗಳಿಂದ ಪ್ರತಿವಾದಿಯ ಪರಿಚಯ ನನಗೆ ಇರುತ್ತದೆ. 12-13 ವರ್ಷಗಳಿಂದ ಪ್ರತಿವಾದಿಯು ನನ್ನ ಬಳಿ ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲ. ನನ್ನ ತಂದೆಯು ಜೀವಂತವಿದ್ದಾಗ ಅವರು ಮಾಡಿದ ವ್ಯವಹಾರಗಳ ಬಗ್ಗೆ ನನಗೆ ತಿಳಿಸುತ್ತಿದ್ದರು. ನನ್ನ ತಂದೆ ಪ್ರತಿವಾದಿ ಮತ್ತು ಬ್ರ್ಯುಂದಾದೇವಿ ರವರಿಗೆ ಮಾತ್ರ ಹಣವನ್ನು ನೀಡುತ್ತಿದ್ದರು, ಬೇರೆ ಯಾರಿಗೂ ಹಣವನ್ನು ನೀಡುತ್ತಿರಲಿಲ್ಲ. ನನ್ನ ತಂದೆ ಜೀವಿತಾವದಿಯಲ್ಲಿ ಚೀಟಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಬಳಿ ಪ್ರತಿವಾದಿ ಚೀಟಿಯನ್ನು ಹಾಕಿದ್ದರು ಎಂದರೆ ಸರಿಯಲ್ಲ. ದಿನಾಂಕ 15-09-2009 ರಂದು ನನ್ನ ತಂದೆ ಒಂದು ಚೀಟಿಯನ್ನು ಪ್ರಾರಂಭಿಸಿದ್ದು ಸದರಿ ಚೀಟಿಯಲ್ಲಿ ಪ್ರತಿವಾದಿಯು ಚೀಟಿದಾರರಾಗಿ ಪ್ರತಿ ತಿಂಗಳು 4000/- ರೂಗಳ ಹಣವನ್ನು ಕಟ್ಟುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ಪ್ರತಿವಾದಿಯ ನಡುವೆ ಹಣದ ವ್ಯವಹಾರವಾಗಿ ಗಲಾಟೆಗಳಾಗಿ ಮನಸ್ತಾಪವುಂಟಾಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಯು ಪ್ರತಿತಿಂಗಳು 5000/- ರುಾಗಳ ಬಡ್ಡಿಹಣವನ್ನು ನನ್ನ ತಂದೆಗೆ ನೀಡುತ್ತಿದ್ದರು ಎಂದರೆ ಸರಿಯಲ್ಲ. ದಿನಾಂಕ 02-07-2009 ರಂದು ಪ್ರತಿವಾದಿಯ ನನ್ನ ತಂದೆಗೆ 35000/- ರುಾಗಳನ್ನು ಬಡ್ಡಿ ಹಣವನ್ನಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಸೇರಿದ ಟ್ರಾಕ್ಟರ್ ಇತ್ತು ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರ್‌ಅನ್ನು ಪ್ರತಿವಾದಿ ಬಾಡಿಗೆಗಾಗಿ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರ್ ನ ಬಾಡಿಗೆ ಹಣದ ವ್ಯವಹಾರದಲ್ಲಿ ನನ್ನ ತಂದೆ ಹಾಗೂ ಪ್ರತಿವಾದಿಯ ನಡುವೆ ಮನಸ್ತಾಪಗಳು ಉಂಟಾಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರ್ ಬಾಡಿಗೆ ಹಾಗೂ ಇತರ ಹಣವಾದ 6,00,000/- ರೂಗಳ ಭದ್ರತೆಗಾಗಿ ನನ್ನ ತಂದೆಯು ಪ್ರತಿವಾದಿಯ ಬಳಿ ದಾಖಲೆ ಬರೆದುಕೊಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಣದ ಸಂಬಂದ ನನ್ನ ತಂದೆಯ ವಿರುದ್ಧ ಪ್ರತಿವಾದಿಯು

ಪೋಲೀಸ್ ದೂರು ನೀಡಿದ್ದು ಪ್ರಕರಣದ ದಾಖಲಾಗಿತ್ತು ಎಂದರೆ ಸರಿಯಲ್ಲ. 95,000/- ರೂಗಳ ಮಾರ್ಟಗೇಜ್ ಮೊತ್ತವನ್ನು ನನ್ನ ತಂದೆ ಪ್ರತಿವಾದಿಗೆ ನೀಡದೇ ಇರುವ ಕಾರಣ ಪ್ರತಿವಾದಿಯು ನನ್ನ ತಂದೆಯ ವಿರುದ್ಧ ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ನಂತರ ಪೋಲೀಸ್ ಠಾಣೆಯಲ್ಲಿ ರಾಜಿ ಪಂಚಾಯತಿ ಮಾಡಿ ನನ್ನ ತಂದೆಯು ಪ್ರತಿವಾದಿಗೆ ಚೆಕ್ ಮೂಲಕ 50 ಸಾವಿರ ರೂಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಉಳಿಕೆ 45 ಸಾವಿರ ರೂಗಳನ್ನು ನನ್ನ ತಂದೆ ಬಡ್ಡಿ ಹಣಕ್ಕಾಗಿ ಜಮಾ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . ನನ್ನ ತಂದೆ ನೀಡಿದ ಚೆಕ್ ಅನ್ನು ಪ್ರತಿವಾದಿಯು ಬ್ಯಾಂಕಿಗೆ ಹಾಜರುಪಡಿಸಿ 50 ಸಾವಿರ ಹಣವನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 29-11-2010 ರ ಅಡಮಾನ ಪತ್ರದಲ್ಲಿ ಕಾಣಿಸಿರುವ ಮೊತ್ತದ ಪೈಕಿ 50 ಸಾವಿರ ಹಣವನ್ನು ನನ್ನ ತಂದೆ ಚೆಕ್ ಮೂಲಕ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ -1 ರ ದಿನಾಂಕದಂದು ಪ್ರತಿವಾದಿಗೆ ನನ್ನ ತಂದೆ ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಮೋಸಮಾಡಿ ನನ್ನ ತಂದೆ ಪ್ರತಿವಾದಿ ಇಂದ ನಿಪಿ -1 ಅನ್ನು ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ .

2. ಪ್ರತಿವಾದಿಯು Electrical Contractor ಆಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಚೀಟಿ ವ್ಯವಹಾರದ ಸಲುವಾಗಿ ನನ್ನ ತಂದೆ ಪ್ರತಿವಾದಿಯಿಂದ ಚೆಕ್ ಗಳು, ಖಾಲಿ ಬಾಂಡ್ ಪೇಪರ್ ಗಳು ಹಾಗೂಆನ್ ಡಿಮ್ಯಾಂಡ್ ಗಳನ್ನು ಪಡೆಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ದಿನಾಂಕಃ 15-09-2011 ರಂದು ಪ್ರತಿವಾದಿಯು ನನ್ನ ತಂದೆಯು ಪಡೆದುಕೊಂಡ ಚೆಕ್ ಗಳು, ಖಾಲಿ ಬಾಂಡ್ ಪೇಪರ್ ಗಳು ಹಾಗೂ ಆನ್ ಡಿಮ್ಯಾಂಡ್ ಗಳನ್ನು ವಾಪಸ್ಸು ನೀಡುವಂತೆ ಹಾಗೂ ಅಧಾರ ಪತ್ರವನ್ನು ರದ್ದು ಪಡಿಸುವಂತೆ ನನ್ನ ತಂದೆಗೆ ಕಾನೂನು ತಿಳುವಳಿಕೆ ನೋಟೀಸ್ ಅನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ .

ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು)

ಓ.ಹೇ.ಕೇ.ಸ.ಇದೆ.

ಸಿ ಜೆ ಮತ್ತು ಜೆ ಎಂ ಎಫ್ ಸಿ,
ಗುಡಿಬಂಡೆ,